## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ.

**ಸಿಸಿ ನಂ. 188 / 2020**

| | | |
|---|---|---|
| ಸಾಕ್ಷಿಯ ಹೆಸರು | : ಪ್ರಭುಸ್ವಾಮಿ | |
| ತಂದೆಯ ಹೆಸರು | : ಲೇಟ್ ನಾಗರಾಜು | |
| ವಯಸ್ಸು | : 63 ವರ್ಷ | |
| ಉದ್ಯೋಗ | ನಿವೃತ್ತ ಎ ಎಸ್ ಐ | ಚಾಸಾ –15 |
| ವಾಸ ಸ್ಥಳ | : ಟಿ ನರಸೀಪುರ | ಫ್ರಾಸಾ –3 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 10.06.2026**
**ದಂಡ ಪ್ರ ಸಂ ವಿಧಿ 299 ರಡಿ ಮುಖ್ಯ ವಿಚಾರಣೆ – ಮಾನ್ಯ ಸ.ಸ.ಅ. ರವರಿಂದ**

ನಾನು 2018 ನೇ ಸಾಲಿನಿಂದ 2021 ನೇ ಸಾಲಿನವರೆಗೆ ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆಯಲ್ಲಿ ಎಎಸ್ಐಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 10.06.2020 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ 1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಕಲಂ 457, 380 IPC ಅಡಿಯಲ್ಲಿ ಪ್ರಕರಣ ದಾಖಲೆ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.ನಂತರ ಅದೇ ದಿನ ಚಾಸಾ 1 ರವರು ತೋರಿಸಿದ ಪ್ರಕರಣ ಸ್ಥಳದಲ್ಲಿ ಚಾಸಾ 2 ,3 ಮತ್ತು 7 ರವರ ಸಮಕ್ಷಮ ಸಂಜೆ 4 ರಿಂದ 5 ರ ಸಮಯದಲ್ಲಿ ಕೊಳ್ಳೇಗಾಲ ಪಟ್ಟಣದ ಬಸ್ತಿಪುರ ಗ್ರಾಮದ ನಾಯಕರ ಬಡಾವಣೆ ಭಾಗ್ಯಮ್ಮ ರವರ ಮನೆಯಲ್ಲಿ ಬಾಡಿಗೆಗೆ ವಾಸ ಮಾಡುತ್ತಿದ್ದ ನಂಜಮ್ಮ ನವರ ವಾಸದ ಮನೆ ಮುಂಭಾಗ ಸ್ಥಳ ಪರಿಶೀಲನೆ ಮಾಡಿ ಅಮಾನತ್ತು ಮಹಜರನ್ನು ಜರುಗಿಸಿರುತ್ತೇನೆ . ಸದರಿ ವೇಳೆಯಲ್ಲಿ ಚಿನ್ನದ ಒಡವೆ ಇರುವ 2 ಖಾಲಿ ಬಾಕ್ಸ ತನಿಖೆ ಸಂಬಂಧ ಅಮಾನತ್ತು ಪಡಿಸಿಕೊಂಡು ಪಿಎಫ್ ನಂಬರ್ 103/20 ರಲ್ಲಿ ಸೇರಿಸಿರುತ್ತೇನೆ. ಹಾಗೂ ಅಂತಿಮ ವರದಿ ಸಲ್ಲಿಸುವ ವರೆಗೂ ಪೋಲಿಸ್ ವಶದಲ್ಲಿ ಇಟ್ಟುಕೊಳ್ಳಲು ಮಾನ್ಯ ನ್ಯಾಯಾಲಯದಲ್ಲಿ ನಿವೇದಿಸಿಕೊಂಡಿರುತ್ತೇನೆ.

ದಿನಾಂಕ 20.06.2020 ರಂದು ಚಾಸಾ 13 ಮತ್ತು 14 ರವರು ಆರೋಪಿಯನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಆರೋಪಿಯನ್ನು ದಸ್ತಗಿರಿ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಹಾಗೂ ಆ ಸಮಯದಲ್ಲಿ ಚಾಸಾ 14 ರವರು ನೀಡಿದ ಆರೋಪಿಯ ದಸ್ತಗಿರಿ ನಿವೇದನೆ ವರದಿಯನ್ನು ಪಡೆದಿರುತ್ತೇನೆ. ದಿನಾಂಕ 20.06.2020 ರಂದು ಬೆಳಿಗ್ಗೆ 7.30 ಯಿಂದ 8.30 ರ ಸಮಯದಲ್ಲಿ ಆರೋಪಿ ಹಾಜರು ಪಡಿಸಿದ ಒಂದು ಕಾರ್ಬನ್ ಕಂಪನಿಯ ಮೊಬೈಲ್ ಮತ್ತು 2320/– (200 ರೂ ಮುಖಬೆಲೆಯುಳ್ಳ 11 ನೋಟು ಹಾಗೂ 50 ರೂ ಮುಖಬೆಲೆಯುಳ್ಳ 2 ನೋಟು ಮತ್ತು 10 ರೂ ಮುಖಬೆಲೆಯುಳ್ಳ 2 ನೋಟುಗಳನ್ನು) ಹಣವನ್ನು ಸಾಕ್ಷಿದಾರರಾದ ಚಾಸಾ 4 ಮತ್ತು 5 , 9,11 ಮತ್ತು 12 ರವರ ಸಮಕ್ಷಮ ಅಮಾನತ್ತು ಕ್ರಮ ಜರುಗಿಸಿ ಮಾಲನ್ನು ವಶಪಡಿಸಿ ಠಾಣಾ ಸ್ವತ್ತಿನ ಪಟ್ಟಿ 106/20 ರಲ್ಲಿ ನಮೂದಿಸಿರುತ್ತೇನೆ. ಸದರಿ ಮಹಜರನ್ನು ಚಾಸಾ 9 ರವರ ಕೈಬರವಣಗಿ ಯಲ್ಲಿ ಬರೆಸಿರುತ್ತೇನೆ. ನಂತರ ಅದೇ ದಿನ ಕೊಳ್ಳೇಗಾಲ ಪಟ್ಟಣದ ದಕ್ಷಿಣ ಬಡಾವಣೆ ಶೀಘ್ಯ ಗ್ರಾಮದ ಮಂಗಲಮ್ಮ ರವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದ ಲಕ್ಷ್ಮೀ ಎಂಬುವವರ ಮನೆ ಮುಂಭಾಗ ಆರೋಪಿ ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ 1, 4 ರಿಂದ 6 ರವರ ಸಮಕ್ಷಮ ಪೋಲಿಸ್ ಸಿಬ್ಬಂದಿಯಾದ 9, 11 ಮತ್ತು 12 ಸಮಕ್ಷಮ 12 ಗ್ರಾಂ 500 ಮಿಲಿ ಚಿನ್ನದ

ಓಲೆಯನ್ನು ಮತ್ತು 3 ಗ್ರಾಂ ತೂಕವಿರುವ ಚಿನ್ನದ ಉಂಗುರವನ್ನು ಅಮಾನತ್ತು ಮಹಜರಿನ ಅಡಿಯಲ್ಲಿ ಬೆಳಿಗ್ಗೆ 9 ಗಂಟೆಯಿಂದ 10.30 ಗಂಟೆ ಸಮಯದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಡಿಸಿದ ಚಿನ್ನದ ಅಂದಾಜು ಬೆಲೆ ಸುಮಾರು 60 ಸಾವಿರ ಮತ್ತು ಸದರಿ ಸ್ವತ್ತನು ಪಟ್ಟಿ ಸಂಖ್ಯೆ 107/20 ರಲ್ಲಿ ನ್ಯಾಯಾಲಯಕ್ಕೆ ನಿವೇದಿಸಿರುತ್ತೇನೆ. ನಂತರ ಅದೇ ದಿನ ಕೊಳ್ಳೇಗಾಲ ಪಟ್ಟಣದ ಬಸ್ತಿಪುರ ಗ್ರಾಮದ ನಾಯಕರ ಬಡಾವಣೆಯ ಭಾಗ್ಯಮ್ಮ ರವರ ಮನೆಯಲ್ಲಿ ಬಾಡಿಗೆ ಇರುವ ನಂಜಮ್ಮ ರವರ ವಾಸದ ಮನೆ ಮುಂಭಾಗ ಆರೋಪಿ ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ಹಾಗೂ ಪೋಲಿಸ್ ಸಿಬ್ಬಂದಿಯಾದ 9, 11 ಮತ್ತು 12 ಸಮಕ್ಷಮ ಸುಮಾರು 1 ಅಡಿ ಉದ್ದ ವಿರುವ ಒಂದು ಕಬ್ಬಿಣದ ಮಚ್ಚನ್ನು ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಠಾಣಾ ಮಾಲು ಪಟ್ಟಿ ಸಂಖ್ಯೆ 108/20 ರಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಿನಾಂಕ 20.06.2020 ರಂದು ಸಾಕ್ಷಿಗಳಾದ ಚಾಸಾ 4,5,6 ರವರ ಹಾಗೂ ಚಾಸಾ 9 ,11 12 ,13 ಮತ್ತು 14 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ದಿನಾಂಕ 11.06.2020 ರಂದು ಚಾಸಾ 7 ಮತ್ತು ನಂಜಮ್ಮ ಕೋಂ ಪುಟ್ಟಮಲ್ಲನಾಯಕ ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 20.06.2020 ರಂದು ಆರೋಪಿಯ ಸ್ವಇಚ್ಚೆ ಹೇಳಿಕೆಯನ್ನು ಪಡೆದಿರುತ್ತೇನೆ. ಸ್ಥಳ ಮತ್ತು ಅಮಾನತ್ತು ಮಹಜರ ಕಾಲದಲ್ಲಿ ಪೋಟೊಗಳನ್ನು ತೆಗೆದಿರುತ್ತೇನೆ. ದಿನಾಂಕ 11.06.2020 ರಂದು ಪಿರ್ಯಾದಿ ಚಾಸಾ 1 ರವರ ಮರುಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ಹೇಳಿಕೆಯಲ್ಲಿ ಚಾಸಾ 1 ರವರು ಬಳಸುತ್ತಿದ್ದ ಮೊಬೈಲ್ ಸಿಮ್ ನಂಬರ್ 9591792285 ಮತ್ತು ಅದರ ಐಎಂವಿ ನಂಬರ್ ನ ಹೇಳಿಕೆಯನ್ನು ಪಡೆದಿರುತ್ತೇನೆ. ಸದರಿ ನಂಬರಿನ ಸಿಡಿಯ ರಿಪೋರ್ಟ ನ್ನು 08.08.2020 ರಂದು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಕ್ಯಾಟಲ್ ನೊಡಲ್ ಆಫೀಸರ್ ಯಿಂದ 65ಬಿ Indian Evidence Act ರಿಪೋರ್ಟ ನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ದಿನಾಂಕ 03.08.2020 ರಂದು ಜಿಯೋ ಡಿಜಿಟಲ್ ಲೈಫ್ ನೋಡಲ್ ಆಫೀಸರ್ ಯಿಂದ 65ಬಿ Indian Evidence Act ರಿಪೋರ್ಟ ನ್ನು ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಪಿರ್ಯಾದಿ ಅವರ ವಶಕ್ಕೆ ಮಾಲುಗಳನ್ನು ನೀಡುವ ಸಂದರ್ಭದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಆರೋಪಿ ಯಿಂದ ಆ ದಿನ ವಶ ಪಡಿಸಿಕೊಂಡ ಮಾಲುಗಳನ್ನು ಸಾಕ್ಷಿಗೆ ನ್ಯಾಯಾಲಯದ ಮುಂದಿರುವ 2 ಚಿನ್ನದ ಖಾಲಿ ಬಾಕ್ಸ ಹಾಗೂ 1 ಕಾರ್ಬನ್ ಮೊಬೈಲ್ ಮತ್ತು ಕಬ್ಬಿಣದ ಮಚ್ಚನ್ನು ತೋರಿಸಲಾಗಿ ಸಾಕ್ಷಿಯೂ ಅದನ್ನು ನೋಡಿ ಗುರುತಿಸಿರುತ್ತಾರೆ . ಸದರಿ ಚಿನ್ನದ ಖಾಲಿ ಬಾಕ್ಸಗಳನ್ನು ಮುಮಾ –1 ಮತ್ತು 2 ಎಂದು 1 ಕಾರ್ಬನ್ ಮೊಬೈಲ್ ನ್ನು ಮುಮಾ–3 ಎಂದು ಕಬ್ಬಿಣದ ಮಚ್ಚನ್ನು ಮುಮಾ–4 ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ–1 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಲಾಗಿ ಅದನ್ನು ನಿಪಿ–1(ಬಿ) ಎಂದು ಗುರುತಿಸಲಾಯಿತು. ದಿನಾಂಕ 10.06.2020 ರಂದು ಆಗಿರುವ ಸ್ಥಳ ಮಹಜರ ನಿಪಿ–2 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಲಾಗಿ ಅದನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ದಿನಾಂಕ 20.06.2020 ರಂದು ಆಗಿರುವ ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–6 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–6(ಎ) ಎಂದು ಗುರುತಿಸಲಾಯಿತು. ಅದೇ ದಿನ ಬೆಳಿಗ್ಗೆ 9 ಗಂಟೆಯಿಂದ 10 ಗಂಟೆ ಸಮಯದಲ್ಲಿ ಮಾಡಿದ ಮತ್ತೊಂದು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ಅದೇ ದಿನ ಬೆಳಿಗ್ಗೆ 11 ಗಂಟೆಯಿಂದ 12 ಗಂಟೆ ಸಮಯದಲ್ಲಿ ಮಾಡಿದ ಮತ್ತೊಂದು ಸ್ಥಳ ಮತ್ತು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–8 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ದಿನಾಂಕ 20.06.2020 ರಂದು ಚಾಸಾ 14 ರವರು ಆರೋಪಿ ನಿವೇದಿಸಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–9 ಹಾಗೂ

ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ದಿನಾಂಕ 08.08.2020 ರಂದು ಏರ್ಟೆಲ್ ನೋಡಲ್ ಆಫೀಸರ್ ರವರು ನೀಡಿದ ಎರಡು 65ಬಿ ಸಿಡಿಆರ್ ರಿಪೋರ್ಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-10 ಮತ್ತು 11 ಎಂದು ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಲಾಗಿ ಅದನ್ನು ನಿಪಿ-10(ಎ) ಹಾಗೂ 11(ಎ) ಎಂದು ಗುರುತಿಸಲಾಯಿತು. ದಿನಾಂಕ 08.08.2020 ರಂದು ಜಿಯೋ ಡಿಜಿಟಲ್ ಲೈಫ್ ನೋಡಲ್ ಆಫೀಸರ್ ಯಿಂದ ಪಡೆದ 65ಬಿ Indian Evidence Act ಸಿಡಿಆರ್ ರಿಪೋರ್ಟನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-12 ಎಂದು ಹಾಗೂ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಲಾಗಿ ಅದನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ನಿಪಿ-2 ರ ಮಹಜರ ಸಮಯದಲ್ಲಿ ತೆಗೆಯಲಾದ 4 ಪೋಟೋಗಳನ್ನು ನೋಡಿ ಗುರುತಿಸಲಾಗಿ ಅದನ್ನು ನಿಪಿ-13 ರಿಂದ ನಿಪಿ-16 ಎಂದು ಗುರುತಿಸಲಾಯಿತು. ನಿಪಿ-6, 7 ಮತ್ತು 8 ರ ಸಮಯದಲ್ಲಿ ತೆಗೆಯಲಾದ ಒಟ್ಟು 8 ಪೋಟೋಗಳನ್ನು ನೋಡಿ ಗುರುತಿಸಲಾಗಿ ಒಟ್ಟಾರೆ ಅದನ್ನು ನಿಪಿ-17 ಎಂದು ಗುರುತಿಸಲಾಯಿತು. ಚಾಸಾ 1 ರವರಿಗೆ ಮಾಲುಗಳನ್ನು ನೀಡುವ ಸಮಯದಲ್ಲಿ ತೆಗೆದ 2 ಪೋಟೊಗಳನ್ನು ನೋಡಿ ಗುರುತಿಸಲಾಗಿ ಒಟ್ಟಾರೆ ಅದನ್ನು ನಿಪಿ-18 ಮತ್ತು 19 ಎಂದು ಗುರುತಿಸಲಾಯಿತು. ದಿನಾಂಕ 20.06.2020 ರಂದು ಬೆಳಿಗ್ಗೆ 7.30 ಯಿಂದ 8.30 ರ ಸಮಯದಲ್ಲಿ ಆರೋಪಿ ಹಾಜರು ಪಡಿಸಿದ 2320/-ರೂಗಳನ್ನು (200 ರೂ ಮುಖಬೆಲೆಯುಳ್ಳ 11 ನೋಟು ಹಾಗೂ 50 ರೂ ಮುಖಬೆಲೆಯುಳ್ಳ 2 ನೋಟು ಮತ್ತು 10 ರೂ ಮುಖಬೆಲೆಯುಳ್ಳ 2 ನೋಟುಗಳನ್ನು) ನೋಡಿ ಗುರುತಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು. )

ಓ ಹೇ ಕೇ ಸಾ ಸ ಇ ಒ

(ಸುನೀತ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.